ರಾಜ್ಯದ ಅಣೆಕಟ್ಟುಗಳ ರಕ್ಷಣೆಗೆ ಕ್ರಮ

2094- ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣರಾಜಸಾಗರ ಹಾಗೂ ರಾಜ್ಯದ ಅಣೆಕಟ್ಟುಗಳ ರಕ್ಷಣೆಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಆ) ಕೃಷ್ಣರಾಜಸಾಗರ ಅಣೆಕಟ್ಟನ್ನು ನಾಶಪಡಿಸುತ್ತೇವೆಂದು ಬೆದರಿಕೆಯೇನಾದರೂ ಬಂದಿದೆಯೇ? (ಇದರ ಹಿಂದಿರುವ ರಾಜಕೀಯ ಹಿನ್ನಲೆ ಏನು?)

ಇ) ಹಾಗಿದ್ದಲ್ಲಿ, ಈ ವ್ಯಕ್ತಿಗಳ ಸಂಘಗಳ ವಿವರಗಳೇನಾದರೂ ಸರ್ಕಾರದ ಬಳಿ ಇವೆಯೇ? (ವಿವರಗಳನ್ನು ಒದಗಿಸುವುದು)

ಈ) ಇದರ ಹಿಂದೆ ಯಾವುದಾದರೂ ಪಿತೂರಿಯ ಹಿನ್ನೆಲೆಯಿದೆಯೆ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬ್ಕಾರಿ ಸಚಿವರು) :

ಅ) ಕೃಷ್ಣರಾಜಸಾಗರ ಮತ್ತು ರಾಜ್ಯದ ಸೂಪಾ, ಕಬಿನಿ, ಲಿಂಗನಮಕ್ಕಿ, ಹೇಮಾವತಿ, ಹಾರಂಗಿ ಹಾಗೂ ತಳಕಳಲೆ ಮತ್ತು ಇತರೇ ಜಲಾಶಯಗಳಿಗೆ ಯಾವುದೇ ಧಕ್ಕೆಯಾಗದಂತೆ ಬಿಗಿಯಾದ ಸೂಕ್ತ ರಕ್ಷಣಾ ವ್ಯವಸ್ಥೆಯನ್ನು ಮಾಡಲಾಗಿದೆ.

ಆ) ದಿನಾಂಕ 14-8-1991ರಂದು ಕೃಷ್ಣರಾಜಸಾಗರ ಅಣೆಕಟ್ಟನ್ನು ಸಿಡಿಸುವುದಾಗಿ ಎಲ್.ಟಿ.ಟಿ.ಇ.ಯೆನ್ನಲಾದ ಅನಾಮಧೇಯ ಪತ್ರಗಳು ಬಂದಿರುತ್ತವೆ. ಕಾವೇರಿ ನೀರಿನ ವಿವಾದದ ಹಿನ್ನೆಲೆಯಲ್ಲಿ ಈ ಪತ್ರಗಳನ್ನು ಬರೆದಿರಬಹುದು

ಇ) ಎಲ್.ಟಿ.ಟಿ.ಇ.ಯ ಕೈವಾಡವೆಂದು ಶಂಕಿಸಲಾಗಿದೆ. ಆದಾಗ್ಯೂ ನಿಜವಾದ ಅಪರಾಧಿಗಳನ್ನು ಕಂಡುಹಿಡಿಯಲು ತನಿಖೆ ಮುಂದುವರೆದಿದೆ. ಈ ಬಗ್ಗೆ ದಿ. ೨೭-೮-೯೧ರಂದು ಸದನದಲ್ಲಿ ಸವಿವರವಾದ ಹೇಳಿಕೆಯೊಂದನ್ನು ಮಾಡಲಾಗಿದೆ.

ಈ) ಇದರ ಹಿಂದೆ ಇರಬಹುದಾದ ಪಿತೂರಿಯನ್ನು ಕಂಡು ಹಿಡಿಯಲು ಅಗತ್ಯ ತನಿಖೆ ಮುಂದುವರೆದಿದೆ.

ರಾಜ್ಯದಲ್ಲಿ ಹೆಚ್ಚಿಗೆ ದರೋಡೆಗಳು ಆಗುತ್ತಿರುವುದು

2151 - ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ನಡೆದ ದರೋಡೆಗಳ ಪ್ರಕರಣಗಳೆಷ್ಟು? (ಪ್ರತಿ ವರ್ಷದ ವಿವರಗಳನ್ನೊದಗಿಸುವುದು)

ಆ) ಅವುಗಳಲ್ಲಿ ಎಷ್ಟು ಗುನ್ನೆಗಳು ತಪಾಸಾಗಿರುತ್ತವೆ.?

ಇ) ಈ ಗುನ್ನೆಗಳಲ್ಲಿ ಎಷ್ಟು ಪ್ರಕರಣಗಳನ್ನು ದಾಖಲು ಮಾಡಲಾಗಿದ್ದಿತು ,ಹಾಗೂ ಅವುಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆಯಾಗಿರುತ್ತದೆ.

ಈ) ಕಳೆದ 3 ವರ್ಷಗಳಲ್ಲಿ ಹೆದ್ದಾರಿಗಳಲ್ಲಿ ನಡೆದ ದರೋಡೆಗಳ ಸಂಖ್ಯೆ ಎಷ್ಟು? ಹಾಗೂ ಇವುಗಳಲ್ಲಿ ಎಷ್ಟು ದರೋಡೆಗಳು ಪತ್ತೆಯಾಗಿವೆ? (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)

ಶ್ರೀ ಧರ್ಮಸಿಂಗ್ (ಗೃಹ ಸಚಿವರು) :

ಅ) 1988 ರಿಂದ 31-7-91ರವರೆಗೆ ಈ ಕೆಳಕಂಡಂತೆ ದರೋಡೆ ಪ್ರಕರಣಗಳು ದಾಖಲಾಗಿರುತ್ತದೆ.

ವರ್ಷ	ದಾಖಲಾದ ಪ್ರಕರಣಗಳು
1988	312
1989	228
1990	303
1991 (31-7-91)	157

ಆ)

ವರ್ಷ	ಪತ್ತೆಯಾದ ಪ್ರಕರಣಗಳು
1988	159
1989	97
1990	131
1991 (31-7-91)	40

ಇ) ಈ ಮೇಲಿನ ಎಲ್ಲಾ ಪ್ರಕರಣಗಳು ದಾಖಲಾಗಿರುತ್ತವೆ. ಆರೋಪಿಗಳಿಗೆ ಶಿಕ್ಷೆಯಾದ ಪ್ರಕರಣಗಳ ವಿವರಗಳು ಕೆಳಗಿನಂತಿವೆ:

ವರ್ಷ	ಶಿಕ್ಷೆಗಳೊಳಗಾದ ಪ್ರಕರಣಗಳು
1988	4
1989	2
1990	-
1991 (31-7-91)	-

ಈ)

ವರ್ಷ	ದಾಖಲಾದ ಪ್ರಕರಣಗಳು	ಪತ್ತೆಯಾದ ಪ್ರಕರಣಗಳು
1988	9	4
1989	15	6
1990	19	6
1991	18	3

ಜಿಲ್ಲಾವಾರು ಮಾಹಿತಿ ಕೆಳಗಿನಂತಿದೆ

ಹೆದ್ದಾರಿ ದರೋಡೆ ಪ್ರಕರಣಗಳ ಬಗ್ಗೆ ಜಿಲ್ಲಾವಾರು ಅಂಕಿ ಅಂಶಗಳು ಈ ಕೆಳಕಂಡಂತೆ ಇವೆ.

	1988		1989		1990		1991	
	ದಾಖಲು	ಪತ್ತೆ	ದಾಖಲು	ಪತ್ತೆ	ದಾಖಲು	ಪತ್ತೆ	ದಾಖಲು	ಪತ್ತೆ
ಬೆಂಗಳೂರು ಜಿಲ್ಲೆ	-	-	1	1	-	-	1	-
ಕೋಲಾರ	-	-	2	1	2	-	7	1
ಮಂಡ್ಯ	1	1	-	-	-	-	-	-
ಚಿತ್ರದುರ್ಗ	-	-	-	-	2	1	3	-
ಬಳ್ಳಾರಿ	4	-	-	-	8	-	4	2
ಬಿಜಾಪುರ	-	-	1	1	-	-	1	-
ಧಾರವಾಡ	-	-	1	1	1	1	-	-
ಬೀದರ್	2	2	5	-	1	-	-	-
ರಾಯಚೂರು	2	1	5	2	5	4	2	-

ಬೆಳಗಾವಿ ಜಿಲ್ಲೆಯಲ್ಲಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಕುಡಿಯುವ ನೀರಿನ ಬಿಡುಗಡೆ ಮಾಡಿದ ಹಣ

2149 - ಶ್ರೀ ಶಿವಾನಂದ ಕೌಜಲಗಿ (ಬೈಲ ಹೊಂಗಲ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಳಗಾವಿ ಜಿಲ್ಲೆಯಲ್ಲಿ 1990-91ನೇ ಸಾಲಿನಲ್ಲಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಕುಡಿಯುವ ನೀರಿನ ಸಲುವಾಗಿ ಬಿಡುಗಡೆಮಾಡಿದ ಹಣವೆಷ್ಟು?

2) ಇದರ ಸಲುವಾಗಿ ಯಾವ ಯಾವ ಕೆಲಸಗಳನ್ನು ಎಲ್ಲೆಲ್ಲಿ ತೆಗೆದುಕೊಳ್ಳಲಾಗಿದೆ ಮತ್ತು ಅಂತಹ ಪ್ರತಿಯೊಂದು ಕೆಲಸಕ್ಕೆ ಬಿಡುಗಡೆ ಮಾಡಲಾದ ಹಣವೆಷ್ಟು?

3) ಕಾರ್ಯಕಾರಿ ಅಭಿಯಂತರು ಕರ್ನಾಟಕ ಅರ್ಬನ್ ವಾಟರ್ ಸಪ್ಲಾಯ್ ಬೆಳಗಾವಿ ಇವರಿಗೆ ವಹಿಸಿದ ಕೆಲಸಗಳೆಷ್ಟು? ಅವುಗಳನ್ನು ಎಂದು ವಹಿಸಿಕೊಡಲಾಗಿತ್ತು ಮತ್ತು ಅವುಗಳನ್ನು ಎಂದು ಪೂರ್ಣಗೊಳಿಸಬೇಕೆಂದು ಆದೇಶ ನೀಡಲಾಗಿತ್ತು?

4) ಕಾರ್ಯಕಾರಿ ಅಭಿಯಂತರು ಕರ್ನಾಟಕ ಅರ್ಬನ್ ವಾಟರ್ ಸಪ್ಲಾಯ್ ಬೆಳಗಾವಿ ಇವರಿಗೆ 1989,1990 ಮತ್ತು 1991ನೇ ಸಾಲಿನಲ್ಲಿ ಬರಗಾಲ ಕಾಮಗಾರಿ ಸಲುವಾಗಿ ಯಾವ ಯಾವ ಕೆಲಸಕ್ಕೆ ಎಷ್ಟು ಹಣ ಬಿಡುಗಡೆ ಮಾಡಲಾಯಿತು ಮತ್ತು ಎಷ್ಟು ಹಣ ವಿಚ್ರ್ಯು ಮಾಡಲಾಯಿತು?

5) ಕಾರ್ಯಕಾರಿ ಅಭಿಯಂತರು ಅರ್ಬನ್ ವಾಟರ್ ಸಪ್ಲಾಯ್ ಇವರಿಗೆ ವಹಿಸಿಕೊಟ್ಟ ಕೆಲಸಗಳನ್ನು ನಿಗದಿತ ವೇಳೆಯಲ್ಲಿ ಮಾಡದಿರುವ ಸಂಗತಿ ನಿಜವೇ? ಹಾಗಿದ್ದಲ್ಲಿ ಸರ್ಕಾರದವರು ಅವರ ಮೇಲೆ ಯಾವ ಕ್ರಮ ಕೈಗೊಂಡಿರುವರು?